

ಭಾರತದ ಶೌಚಾಲಯಗಳಲ್ಲಿ ಹೆಚ್ಚೆಂದರೆ ಕುಳಿತು ಓದುವುದೇ ದೊಡ್ಡ ಕೆಲಸ. ಜಪಾನಿನ ಈ 'ಬುದ್ಧಿವಂತ ಶೌಚಾಲಯ' ಪ್ರಯೋಗಾಲಯದ ಕೆಲಸವನ್ನೂ ಒಟ್ಟಿಗೇ ಮಾಡುತ್ತದೆ. ಸಾರ್ವಜನಿಕ ಶೌಚಾಲಯ ಬಳಸಿದ ನಂತರ ಏನೇನು ಕ್ರಿಮಿಗಳು ಸೇರಿಕೊಳ್ಳುತ್ತವೆಯೋ ಅವನ್ನೆಲ್ಲ ಈ ಪ್ರಯೋಗಾಲಯ ಚಕಚಕನೆ ಪರೀಕ್ಷೆ ಮಾಡಿ ಹೇಳಿಬಿಡುತ್ತದೆ. ಮುಂದಿನ ಹೆಜ್ಜೆ- ಅಲ್ಲೇ ವೈದ್ಯರನ್ನೂ ನೇಮಿಸುವುದಾ?

ಫುಟ್ಬಾಲ್ ವಿಶ್ವಯುದ್ಧ ಗೆದ್ದ ಸ್ಪೇನ್‌ಗೆ ಈಗ 'ಟೊಮ್ಯಾಟಿನಾ' ಯುದ್ಧದಲ್ಲಿ ಹೋರಾಡುವ ಹುಮ್ಮಸ್ಸು. ಬೇರೆ ಕಡೆ ಟೊಮ್ಯಾಟೊ ಕೆಚಪ್ ಮಾಡಿಕೊಂಡು ಉರುಳಾಡಿದರೆ ಸ್ಪೇನಿನಲ್ಲಿ ಕೈಯಲ್ಲಿ ಟೊಮ್ಯಾಟೊ ಅಸ್ತ್ರ ಹಿಡಿದು ಹೊಡೆದಾಡುವುದು ಸಂಪ್ರದಾಯ. ಜೊತೆಗೆ ಜಪಾನ್, ಆಸ್ಟ್ರೇಲಿಯಾದಿಂದಲೂ ಟೊಮ್ಯಾಟೊ ಸೈನಿಕರು ಆಗಮಿಸುತ್ತಾರಂತೆ.



ಬ್ರಿಟಿಷರ ನೆಚ್ಚಿನ ಸಂಗಾತಿ ಪತ್ನಿಗಿಂತ ಬ್ಯಾಂಕೇ ಅಂತೆ. ಪತ್ನಿಯ ಜೊತೆ ಸರಾಸರಿ 14.1 ವರ್ಷ ಕಳೆಯುವ ಬ್ರಿಟಿಷರು, ಒಂದೇ ಬ್ಯಾಂಕ್ ಜೊತೆ ಸರಾಸರಿ 16.5 ವರ್ಷಗಳ ಕಾಲ ವ್ಯವಹಾರ ನಡೆಸುತ್ತಾರಂತೆ. ಬ್ಯಾಂಕ್ ಹೇಗೆ ತೃಪ್ತಿಕರ ಸೇವೆ ನೀಡುತ್ತೋ ಅದನ್ನು ಪತ್ನಿಯರು ಅಧ್ಯಯನ ಮಾಡಿದರೆ ಒಳಿತು.

ದ.ಕೊರಿಯಾದ ಈ ಫುಟ್ಬಾಲ್ ಆಟಗಾರ ಮೈ ತುಂಬಾ ಹಚ್ಚೆ ಹಾಕಿಸಿಕೊಂಡು ಮೈದಾನಕ್ಕಿಳಿದರೆ ಪ್ರೇಕ್ಷಕರ ಗಮನ ಸೆಳೆದು ಬಿಡುತ್ತಾನಂತೆ. ಅದಕ್ಕೇ ಅಲ್ಲಿಯ ಕ್ಲಬ್ ಆತನಿಗೆ ಸದಸ್ಯತ್ವ ನಿರಾಕರಿಸಿದ್ದು ದೂರು ಮಾನವ ಹಕ್ಕು ಆಯೋಗಕ್ಕೂ ಹೋಯಿತು. ಅಲ್ಲಿಯೂ ಕ್ಲಬ್‌ಗೇ ಜಯ. ಈಗ 'ಹಚ್ಚೆ ಹಕ್ಕು' ಎಂದು ಆತ ಮೈದಾನದ ಹೊರಗೆ ಗಮನ ಸೆಳೆಯಲು ಸಜ್ಜಾಗಿದ್ದಾನೆ.





ಬ್ರಿಟನ್ನಿನ ಯುವ ಪ್ರಧಾನಿ ಡೇವಿಡ್ ಕ್ಯಾಮೆರಾನ್ ದಾಖಲೆಯ ಮೇಲೆ ದಾಖಲೆ ಮಾಡುತ್ತಿದ್ದಾರೆ. ಎಲ್ಲವೂ ಯುವಜನಾಂಗಕ್ಕೆ ಪ್ರಿಯವಾದವುಗಳೇ. ಒಂದು ಕಡೆ ಕ್ರಿಕೆಟ್ ಇಷ್ಟ ಎಂದರೆ, ಇನ್ನೊಂದು ಕಡೆ ಹುಡುಗಿಯರು ಇಷ್ಟ ಎಂದು ಎಲ್ಲರನ್ನೂ ಇಷ್ಟು ಇಷ್ಟೇ ಮುಜುಗರ ಮಾಡಿದ್ದ ಡೇವಿಡ್ ಈಗ ಪತ್ನಿಯೊಡನೆ ಪ್ರಧಾನಿ ನಿವಾಸದಲ್ಲಿ ಮಗುವಿನ ತೊಟ್ಟಿಲು ತೂಗುತ್ತ ಇನ್ನೇನು ಹೊಸ ದಾಖಲೆ ಮಾಡಲಿ ಎಂದು ಯೋಚಿಸುತ್ತಿದ್ದಾರಂತೆ.

ಚುನಾವಣಾ ವೆಚ್ಚಕ್ಕೆ ನಿಧಿ ಸಂಗ್ರಹಿಸುತ್ತಿರುವ ವೆನೆಜುವೆಲಾ ರಾಜಕಾರಣಿಯೊಬ್ಬ ನಿಧಿಗೆ ಕೊಡುಗೆ ನೀಡುವವರಿಗಾಗಿ ಲಾಟರಿ ಎತ್ತುತ್ತಾನಂತೆ. ಬಹುಮಾನ ಸಿಲಿಕಾನ್ ಸ್ತನ ಶಸ್ತ್ರಚಿಕಿತ್ಸೆ. ಜಾಗತಿಕ ಸುಂದರಿಯರನ್ನು ನೀಡುತ್ತಿರುವ ವೆನೆಜುವೆಲಾದಲ್ಲಿ ಇಂಥದಕ್ಕೆಲ್ಲಾ ಭಾರಿ ಬೇಡಿಕೆ. ರಾಜಕಾರಣಿಯನ್ನು ಸುದ್ದಿಮಿತ್ರರು ಕೆಣಕಿದರೆ, 'ಶಸ್ತ್ರಚಿಕಿತ್ಸೆ ಮಾಡುವವನು ನಾನಲ್ಲ, ವೈದ್ಯ' ಎಂದು ಉತ್ತರಿಸುತ್ತಾನಂತೆ. ದೊಡ್ಡ ರಾಜಕಾರಣಿಯೇ ಆಗುವ ಲಕ್ಷಣ ಖಂಡಿತ ಇದೆ.



ರ್‍ಯಾಂಪ್ ಮೇಲೆ ಕ್ಯಾಟ್‌ವಾಕ್ ಮಾಡುವ ಯುವತಿಯರು ದ.ಕೊರಿಯಾದಲ್ಲಿ ಫಿಶ್‌ವಾಕ್ (ಸ್ವಿಮ್?) ಮಾಡಿದರು. ಇದು ನೀರಡಿಯ ಪ್ರಥಮ ಫ್ಯಾಷನ್ ಶೋ ಅಂತೆ. ನೀರಿನಲ್ಲಿ ಹೀಗೆ ಮೈ ತುಂಬಾ ಉಡುಪು ತೊಟ್ಟು ಫ್ಯಾಷನ್ ಶೋ ಮಾಡಿದರೆ ಜನ ಮುಖ ತಿರುಗಿಸುತ್ತಾರೆಂದು ಸಂಘಟಕರಿಗೆ ಗೊತ್ತಿಲ್ಲ ಪಾಪ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65